ಪ್ರಮಾಣೀಕರಿಸಲಾದ ದಿನಾಂಕಃ **09.09.2025.**

<u>ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್. ಪಿ. ಎಂ ವಕೀಲರಿಂದಃ</u>

ನಿ. ಡಿ. 2 ರಿಂದ 6 ದಾಖಲೆಗಳು ಬಿಟ್ಟರೆ ಬೇರೆ ಕಂದಾಯ ದಾಖಲೆಗಳು ಕೊಟ್ಟಿಲ್ಲ ಎಂದರೆ ಗೊತ್ತಿಲ್ಲ. ತಹಶೀಲ್ದಾರವರಿಗೆ ನೀಡಿರುವ ಹಿಂಬರಹವನ್ನು ನೋಡಿ ಗುರುತಿಸಿದ್ದು, ಅದನ್ನು ನಿ. ಪಿ. 4 ಎಂದು ಗುರುತಿಸಲಾಯಿತು. ನಿ. ಪಿ. 4 ರಂತೆ ಖಾತೆ ಆಗುವುದಿಲ್ಲ ಎಂದು ಹೇಳಿದ್ದಕ್ಕೆ ಉಪವಿಭಾಗಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಮೇಲ್ಮನವಿಯು ವಜಾ ಆಯಿತು ಎಂದರೆ ಸರಿ, ಅದನ್ನು ನೋಡಿ ಒಪ್ಪಿದ್ದು ನಿ. ಪಿ. 5 ಎಂದು ಗುರುತಿಸಲಾಯಿತು. ಇದನ್ನು ಪ್ರಶ್ನಿಸಿ ಜಿಲ್ಲಾಧಿಕಾರಿಗಳು ಮಡಿಕೇರಿ ಅವರಿಗೆ ಮೇಲ್ಮನವಿ ಆರ್ ಪಿ ನಂ. 9/2018 ರಂತೆ ಅರ್ಜಿ ಕೊಟ್ಟೆವು ಎಂದರೆ ನನಗೆ ನೆನಪಿಲ್ಲ. ಆ ಮೇಲ್ಮನವಿಯನ್ನು ನಾವು ಹಿಂಪಡೆದಿರುತ್ತೇವೆ ಎಂದರೆ ನೆನಪಿಲ್ಲ, ಸಾಕ್ಷಿಗೆ ಆದೇಶ ಪುಟವನ್ನು ತೋರಿಸಿದರೂ ನೆನಪಿಲ್ಲ ಎಂದು ಹೇಳಿರುತ್ತಾರೆ. ಆ ದಾಖಲೆಯಲ್ಲಿ ಸಾಕ್ಷಿಯ ಹೆಸರು, ವಿಳಾಸ, ಗಂಡನ ಹೆಸರು ಹೇಳಲಾಗಿ ಒಪ್ಪಿರುತ್ತಾರೆ.

ಕಂದಾಯ ನ್ಯಾಯಾಲಯವಾದ ಎ. ಸಿ. ಕೋರ್ಟ್‌ನಲ್ಲಿ ಯಥಾವತ್ತಾಗಿ entry ಇರುವ ರೀತಿಯೇ ಮುಂದುವರೆಸಿಕೊಂಡು ಹೋಗಬೇಕು ಎಂದು ಆದೇಶವಾಗಿದ್ದು ಅದರಂತೆ ನಾವು ನಡೆದುಕೊಂಡಿರುತ್ತೇವೆ. ನನಗೆ ಮಾರಾಟ ಮಾಡಿದ ವಿಕ್ರಯದಾರರ ಹೆಸರುಗಳು ಜಮಾಬಂಧಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಿ. ಪಿ. 4 ಮತ್ತು 5 ಆದೇಶಗಳು ಇದ್ದರು ಸರ್ವೆ ನಂ 232 ರಲ್ಲಿ ನನ್ನ ಎಂ. ಆರ್ 7/2016-17 ರಂತೆ ದಿ. 24.11.2016 ರಂತೆ ನನ್ನ ಗಂಡನ ಹೆಸರಿಗೆ ವರ್ಗಾಯಿಸಲಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಸರ್ವೆ ನಂ 187 ನನ್ನ ಮಗನ ಪ್ರದೀಪ್ ಹೆಸರಿಗೆ ವರ್ಗಾಯಿಸಲಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ.

1966 ರಲ್ಲಿ ಆದ ವಿಭಾಗದಂತೆ ಗಡಿ ಗುರುತುಗಳಾಗಿ ವಿಂಗಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ಗಮನಕ್ಕೆ ತಂದು ಸರ್ವೆ ಮಾಡಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಇದುವರೆಗೂ ಗಡಿ ಗುರುತುಗಳನ್ನು ಗುರುತಿಸಿ ವಿಭಾಗದಂತೆ ವಿಂಗಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈಗ ವಾದಿ ವಿಂಗಡಿಸಲು ಮತ್ತು ಗಡಿ ಗುರುತುಗಳನ್ನು ವಿಭಾಗದಂತೆ ಗುರುತಿಸಲು ಸಂಬಂದಪಟ್ಟ ಇಲಾಖೆಗೆ ನಾನು, ನನ್ನ ಗಂಡ, ನನ್ನ ಮಗ ಅರ್ಜಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು ಆಸ್ತಿ ಖರೀದಿಸಿದ ದಿನ ಮಾರಾಟಗಾರರಿಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಕಾನೂನು ರೀತಿಯಲ್ಲಿ ಬಟಮಾಣೆ ಆಸ್ತಿಯನ್ನು ಖರೀದಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರದಂತೆ ವಾದಿಗಳ ಆಸ್ತಿಗಳನ್ನು ಹೊಡೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**
ಸಿವಿಲ್ ನ್ಯಾಯಾಧೀಶರು,ಪೊನ್ನಂಪೇಟೆ.